ಎಚ್.ಜಿ. ಜಗದೀಶ್, ಮೈಸೂರು
*ಬ್ರಾಹ್ಮಣರ ಬಗ್ಗೆ, ಬ್ರಾಹ್ಮಣ್ಯದ ಕುರಿತು ಕೆಲವರ ಅವಹೇಳನ ಏಕೆ?*



ಬೈದಾದರೂ ಅವರಲ್ಲಿ ಒಗ್ಗಟ್ಟು ತರಿಸುವ ಸದುದ್ದೇಶವಂತೆ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಹುಲ್ಲು ತಿನ್ನುವ ಕತ್ತೆ ಕಾಗದವನ್ನೇಕೆ ತಿನ್ನುತ್ತೆ ಸಾರ್?*
ಕಾಗದದಲ್ಲಿ ಹುಲ್ಲಿನ ಅಂಶವಿದೆ ಎಂದು ಕತ್ತೆಗೂ ತಿಳಿದಿದೆಯಂತೆ!

ಆರ್. ನಾಗರಾಜ್, ಗೊರೂರು
*ಸುಮ್ಮನಿದ್ರೆ ತಪ್ಪಗಿರೋ ಅವಳು ಮಾತಾಡಿದ್ರೆ ಎಗರಾಡ್ತಾಳಲ್ಲಾ...?*
ತಿಳಿಯಿತು ಬಿಡಿ. ಅವಳು ನ್ಯೂಸ್‌ಚಾನಲ್‌ನ ಆ್ಯಂಕರ್!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಹೂವಿನ ಸುವಾಸನೆ, ಹೆಣ್ಣಿನ ಸೌಂದರ್ಯ ಇವುಗಳಿಗೆ ಮಾರುಹೋಗದವರುಂಟೆ?*
ಇದ್ದಾರೆ; ನೆಗಡಿ ಬಂದವರು, ಮಳ್ಳಿಗಣ್ಣಿಗರು.

ಅಮರಯ್ಯ ಪತ್ರಿಮಠ, ಸುರಪೂರ
*ಸಮಯ ನಮಗಾಗಿ ಕಾಯುವಂತಿದ್ದಿದ್ದರೆ?*



ಕಾದೂ ಕಾದೂ ಗಡಿಯಾರಕ್ಕೂ ಗಡ್ಡ ಬೆಳೆದು ಋಷಿಯಂತಾಗಿಬಿಡುತ್ತಿತ್ತು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಈ ಪ್ರಪಂಚದಲ್ಲಿ ಮೊದಲು ಜನಿಸಿದ್ದು ಹೆಣ್ಣೋ, ಗಂಡೋ?*
ಜನಿಸಿದ್ದು ಹೆಣ್ಣೇ; ಆದರೆ ಮೇಕಪ್ ಮಾಡಿಕೊಂಡು ಹೊರಬರುವಷ್ಟರಲ್ಲಿ ಗಂಡು ಹುಟ್ಟಿ ತಾನೇ ಮೊದಲಿಗನೆಂದು ಅನೌನ್ಸಿಸಿಬಿಟ್ಟಿದ್ದ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ಸತ್ತವರ ಮನೆಯ ಮುಂದೆ ಹೊಗೆ ಯಾಕೆ ಹಾಕ್ತಾರೆ?*
ಮೇಲಕ್ಕೆ ಪ್ರಯಾಣ ಮಾಡಬೇಕಾದ ಆತ್ಮಕ್ಕೆ ಹೊಗೆ ಟ್ರಾವಲ್ ಗೈಡ್ ಅಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ತ್ರೇತಾಯುಗದಲ್ಲಿ ಶ್ರೀರಾಮ ಹೆಂಡತಿಗಾಗಿ ಸೇತುವೆಯನ್ನು ಕಟ್ಟಿದ. ಈ ರಾಂ ಸೇತುವೆ ಕಟ್ಟುವರೇ?*
ಖಂಡಿತ; ಪ್ರೀತಿಯ, ರೀತಿಯ, ನೀತಿಯ, ಸ್ನೇಹದ ಸೇತುವೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪಾ! ಮೊದಲ ರಾತ್ರಿ ನವವಧು ಹಾಲು ಕೊಡುವುದರ ಬದಲಿಗೆ ಆಲ್ಕೋಹಾಲ್ ಕೊಟ್ಟರೆ?*
ಸೋಡಾ ಕೊಡಲಿಲ್ಲವೆಂದು ಶುರುವಾದ ಜಗಳ ಸೋಡಾಚೀಟಿಯಲ್ಲಿ ಕೊನೆಯಾಗುತ್ತದೆ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಕನ್ನಡಿಗೂ, ಮುನ್ನುಡಿಗೂ ಇರುವ ವ್ಯತ್ಯಾಸವೇನು ರಾಮ್‌ಜೀ?*
ಕನ್ನಡಿ ಯಾವಾಗಲೂ ಸತ್ಯವನ್ನೇ ಹೇಳುತ್ತದೆ. ಆದರೆ...

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
*ತೀರಿಸಲಾಗದ ಋಣ ಯಾವುದು?*
ಕಡೆಯಲ್ಲಿ ಹೊರುವ ನಾಲ್ಕು ಭುಜಗಳ ಋಣ.

ಎನ್. ಗೋಪಾಲರಾವ್, ಬೆಂಗಳೂರು
*ಬೇರೆ ಪತ್ರಿಕೆಗಳಲ್ಲಿನ ಉತ್ತರಭೂಪರೆಲ್ಲ ಫೋಟೋ, ಹೆಸರು ಸಮೇತ ಮಿಂಚುತ್ತಿದ್ದರೆ ನೀವು ಮಾತ್ರ ಇಲ್ಲ. ಏಕೆ? ಘೋರ ಅಪರಾಧವೇನಾದರೂ ಮಾಡಿದ್ದೀರಾ?*
ಹಾಗೇನಿಲ್ಲ; ಪರಿಮಳದಿಂದಲೇ ಪರಿಚಿತವಾಗುವ ಕಸ್ತೂರಿಗೆ ವಿಸಿಟಿಂಗ್ ಕಾರ್ಡ್‌ನ ಅಗತ್ಯವಿಲ್ಲ ಅಲ್ಲವೇ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಡಿಯರೆಸ್ಟ್, ನಿಯರೆಸ್ಟ್; ಇವರಲ್ಲಿ ಯಾರನ್ನು ಪ್ರೀತಿಸಲಿ?*
ಬಸ್, ಆಟೋ, ಟ್ಯಾಕ್ಸಿ, ರೈಲು ದರಗಳು ಹೆಚ್ಚಾಗಿರುವುದರಿಂದ ನಿಯರೆಸ್ಟೇ ಬೆಸ್ಟು!

ವಿ. ಹೇಮಂತಕುಮಾರ್, ಬೆಂಗಳೂರು
*ನನ್ನ ಪ್ರತಿ ಮಾತಿಗೂ ನನ್ನವಳು ವಾಸ್ತುದೋಷ ಅಂತಿರ್ತಾಳಲ್ಲಾ...?*
ನಿಮ್ಮ ಪೂರ್ವೋತ್ತರಗಳು ಸರಿಯಿಲ್ಲವಂತಲ್ಲ!

## ಬಹುಮಾನಿತ ಪ್ರಶ್ನೆ

ಮುಕುಂದ ಹೆರಕಲ್ಲ, ಗುಲ್ಬರ್ಗಾ
*ಮಹಿಳೆಯರು ಏಕೆ ಅಂತ್ಯಕ್ರಿಯೆಯಲ್ಲಿ ಹೆಗಲು ಕೊಡುವುದಿಲ್ಲ?*
ಹೈಟ್ ವ್ಯತ್ಯಾಸವಾಗಿ ಶವ ಜಾರಿಬಿಡುವುದಲ್ಲ!

ಅಶೋಕ ಸನ್ನೂರ, ಅಮೀನಗಡ
*ಬದುಕುವುದಕ್ಕಾಗಿ ತಿನ್ನಬೇಕೋ, ತಿನ್ನುವುದಕ್ಕಾಗಿ ಬದುಕಬೇಕೋ?*
ಕಾಟಾಚಾರದ ಅಡಿಗೆಯಾದರೆ ಬದುಕುವುದಕ್ಕಾಗಿ ತಿನ್ನಿ; ರುಚಿಕರ ಅಡಿಗೆಯಾದರೆ ತಿನ್ನುವುದಕ್ಕಾಗಿ ಬದುಕಿ.

ವೈ.ಜಿ. ನರಸಿಂಹನ್, ಶಿವಮೊಗ್ಗ
*ಯಶಸ್ಸು ಯಾರಿಗೆ ಸುಲಭ?*
ಮಾವ, ಪತ್ನಿ, ಬಾಸ್ ಹೇಳಿದ್ದಕ್ಕೆಲ್ಲಾ ಎಸ್ ಎಸ್ ಎನ್ನುತ್ತಾ ಸಾಗುವವರಿಗೆ.

ಸುಂದರ್, ಬೆಂಗಳೂರು
*ಹೆಂಡತಿ ಮುನಿಸಿಕೊಂಡರೆ ರಮಿಸಬೇಕೋ, ವಿರಮಿಸಬೇಕೋ?*




ಕ್ಷಮಿಸಬೇಕು, ಶೀಘ್ರವೇ ಹತ್ತಿರದ ಎ.ಟಿ.ಎಂ.ನತ್ತ ಕ್ರಮಿಸಬೇಕು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ದೇವರು ಸರ್ವಾಂತರ್ಯಾಮಿಯಾದ ಮೇಲೆ ಅವನಿಗೆ ವಾಹನಗಳ ಅವಶ್ಯಕತೆಯೇನಿದೆ?*
ಏನೇನೂ ಇಲ್ಲ; ತೆಂಡುಲ್ಕರ್‌ಗೆ ಮ್ಯಾನ್ ಆಫ್ ದ ಸೀರೀಸ್ ಎಂದು ಮೋಟರ್‌ಬೈಕ್ ಕೊಟ್ಟಂತೆ ದೇವತೆಗಳಿಗೂ ಭಕ್ತರು ಕೊಟ್ಟಿರುವರಷ್ಟೆ!

ಪಿ.ಎಂ. ಸುರೇಶ್, ಸುಳ್ಯ
*ಹೆಣ್ಣಿನ ದಬ್ಬಾಳಿಕೆ, ಶೋಷಣೆಗೆ ಒಳಗಾದ ಗಂಡನ್ನು ಸಮಾಜ ಹಾಸ್ಯದೃಷ್ಟಿಯಿಂದ ನೋಡುವ ಹಿಂದಿನ ಉದ್ದೇಶವೇನು?*
ಅದು ಜೆರಿಯೇ ಟಾಮ್‌ನನ್ನು ಆಟವಾಡಿಸುವಂತಹ ಟಾಮ್ & ಜೆರಿ ಕಾರ್ಟೂನ್‌ನಂತೆ ಕಾಣುವುದರಿಂದ.

■ ರಾಮ್